# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಶ್ರೀ ಮೂಕಪ್ಪ ತಂದೆ ದಿ॥ ಮಾರೆಪ್ಪ<br>2)ದೊಡ್ಡ ಬಸಪ್ಪ ತಂದೆ ದಿ॥ ಮಾರೆಪ್ಪ<br>3)ಶ್ರೀ ಸಿದ್ದಪ್ಪ ತಂದೆ ದಿ॥ ಮಾರೆಪ್ಪ<br>4)ಬಸಮ್ಮ ತಂದೆ ದಿ॥ ಮಾರೆಪ್ಪ<br>5)ಮಾರೆಮ್ಮ ತಂದೆ ಮಾರೆಪ್ಪ | ಕಂದಾಯ ನಿರೀಕ್ಷಕರು, ಕೋಳೂರು |

ವಿಷಯ:-ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕೊರ್ಲಗುಂದಿ ಗ್ರಾಮದ ಸರ್ವೆ ನಂ:342/3 ವಿಸ್ತೀರ್ಣ:10.00ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*******

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕೊರ್ಲಗುಂದಿ ಗ್ರಾಮದ ಸರ್ವೆ ನಂ:342/3 ವಿಸ್ತೀರ್ಣ:10.00ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀಮತಿ ದೊಡ್ಡ ಬಸಮ್ಮ ಗಂಡ ದಿ॥ ಮಾರೆಪ್ಪ ಇವರು ಹಿರಿಯರ ಸಂಮುಕದಲ್ಲಿ ಮಾಡುಕೊಂಡ ಪಾಲು ವಿಭಾಗ ಪತ್ರದಂತೆ 1)ಶ್ರೀ ಮೂಕಪ್ಪ ತಂದೆ ದಿ॥ ಮಾರೆಪ್ಪ 2)ದೊಡ್ಡ ಬಸಪ್ಪ ತಂದೆ ದಿ॥ ಮಾರೆಪ್ಪ 3) ಶ್ರೀ ಸಿದ್ದಪ್ಪ ತಂದೆ ದಿ॥ ಮಾರೆಪ್ಪ4)ಬಸಮ್ಮ ತಂದೆ ದಿ॥ ಮಾರೆಪ್ಪ 5)ಮಾರೆಮ್ಮ ತಂದೆ ಮಾರೆಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ಕೋಳೂರು ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯವುದೇ ಅಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ನಮೂನೆ-21ಕ್ಕೆ ಭೂಮಾಲಿಕರು ಮತ್ತು ಅರ್ಜಿದಾರರು ಸಹಿಮಾಡಿರದ ಕಾರಣ ಕಂದಾಯ ನಿರೀಕ್ಷಕರು, ಕೋಳೂರು ಇವರು ಸದ್ರಿ ಪಾಲು ವಿಭಾಗ ಕಡತವನ್ನು ತಿರಸ್ಕರಿಸಿ ಇತ್ಯರ್ಥ ಪಡಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:10-03-2014, 13-10-2014, 22-12-2014, 16-03-2015, 23-11-2015, ಮತ್ತು 30-05-2016 ರಂದು ವಿಚಾರಣೆಗೆ ಕರೆಯಲಾಗಿ ಅರ್ಜಿದಾರರು ಪ್ರಕರಣಕ್ಕೆ ಗೈರು ಹಾಜಲಾಗಿರುತ್ತಾರೆ. ಭೂಮಾಲಿಕರು ಪ್ರಕರಣಕ್ಕೆ ಹಾಜರಾಗಿ ಈ ಪಾಲು ವಿಭಾಗ ಮಕ್ಕಳಿಗೆ ಒಪ್ಪಿಗೆ ಇರುವುದಿಲ್ಲವಾದ ರಿಂದ ಸದ್ರಿ ವಹಿವಾಟನ್ನು ರುದ್ದು ಪಡಿಸಲುಇ ಮತ್ತು ತನ್ನ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ಮುಂದುವರಿಸಲು ಕೋರಿರುತ್ತಾರೆ ಆದ್ದರಿಂದ ಈಕೆಳಗಿನಂತೆ ಆದೇಶ.

-::ಆದೇಶ::-

ಸಂ/ಕಂ/ವಿವಾದ/33/2013-14 ದಿನಾಂಕ: 11 / 7 /2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಕೊರ್ಲಗುಂದಿ ಗ್ರಾಮದ ಸರ್ವೆ ನಂ:342/3 ವಿಸ್ತೀರ್ಣ:10.00ಎಕರೆ ಜಮೀನಿನ ಸದ್ರಿ ವಹಿವಾಟನ್ನು ರದ್ದು ಪಡಿಸದೆ ಶ್ರೀಮತಿ ದೊಡ್ಡ ಬಸಮ್ಮ ಗಂಡ ದಿ॥ಮಾರೆಪ್ಪ ಇವರ ಹೆಸರನ್ನು ಮುಂದುವರಿಸಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 11.7.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ

ತಹಶೀಲ್ದಾರರು, ಬಳ್ಳಾರಿ
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ